ಮೈಸೂರ ಗಿಜಿಟ್.

ಸಂ. XXXI.] ಸರ್ಕಾರವಿಂದ ಪ್ರಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 17, ಸ್ಟ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರೆಜಿಸ್ಟ್ರೇರ್ಷ ವ ಯಡ್ಮಿನಿಸ್ಟ್ರೇಷ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷನ್ಸುಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

ಸೂಚನೆ—ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 5ನೇ ಡಿಸೆಂಬರ್ 1896.

ನಂ. 6513—ವಿ. 1223, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಮೈಸೂರ್ ಸಂಸ್ಥಾನಾಮುಳೆ ದರೋಬಸ್ತು ಪಬ್ಲಿಕ್ ಆಫಿಸುಗಳೂ ಕ್ರಿಸ್ತಮಸ್ ರಜಾಬಗ್ಯಾಗಿ, 1896ನೇ ಡಿಸೆಂಬರ್ 24ನೇ ಬೃಹಸ್ಪತಿವಾರದ ಲಾಗಾಯತು 1897ನೇ ಜನವರಿ 2ನೇ ಶನಿವಾರದ ವರಿಗೆ, ಉಭಯದಿನಗಳೂ ಸೇರಿ, ಬರಖಾಸ್ತ್ ಮಾಡಲ್ಪಡತಕ್ಕದ್ದು.

2. ಜರೂರಿಯಾತ್ ಕೆಲಸ ನಡಿಯುವ ಬಗ್ಗೆ ಇಲಾಖಾ ಮೊಖ್ತೆಸರರುಗಳಿಂದ ಏರ್ಪಾಡು ಮಾಡಲ್ಪಡತಕ್ಕದ್ದು.

3. ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಕಛೇರಿಗಳಿಗೂ ಮತ್ತು ಜವಾಬಂದಿ ಕೆಲಸದಮೇಲಿರುವ ಆಫಿಸರುಗಳಿಗೂ ಲಗಾವಾಗುವದಿಲ್ಲ.

ನಂ. 6509.—ಲೋ. ಫಂ. 65.—95, ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಕಾರುವಳ್ಳಿ-ಬರಿಕೆರೆ ಬೀದಿಯು ಶಿವಮೊಗ್ಗಾ ಡಿಸ್ಟ್ರಿಕ್ಟು ತೀರ್ಥಹಳ್ಳಿ ಪಟ್ಟಣದ ಮ್ಯುನಿಸಿಪಲ್ ಸರಹದ್ದುಗಳಿಂದ ವಿನಾಯಿಸಲ್ಪಟ್ಟಿರುತ್ತೆ.

ತಾರೀಖು 26ನೇ ನವಂಬರ್ 1896.

ನಂ. 6132.—ಲೋ. ಫಂ. 83—96, ಲ್ಯಾಂಡ್ ಅಕ್ವಿಜಿಷ್ನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನೆಂದರೆ, ಇದರಡಿ ಜಂಟಿಸಲ್ಪಟ್ಟಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆ ಮತ್ತು ಜಮ್ಮಿ ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರ್ ಷಹರ್ ನಜರ್‌ಬಾದ್ ಮೊಹಲ್ಲಾ ಇಟ್ಟಿಗ್ಗೂಡಿನಲ್ಲಿ ಮೆಸ್ಸರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆಯನ್ನ ಬಡಾಯಿಸುವ ಬಗ್ಯಾಗಿ ಬೇಕಾಗಿರುತ್ತವೆ:—

ಜಂಬರ್ ನಂ.	ಜೀವಿಯ ಹೆಸರು.	ಹೋರ್ ನಂಬರು.	ನಮೂನೀಕರ ಹೆಸರು.	ಅವಶ್ಯಕವಾಗಿರುವ ಸ್ವತ್ತಿನ ವಿವರ.	ಪೂರ್ಣ ಪ್ಲಾನು.	ಉಜ್ಜರ ಪಡ್ಡಿಣಿ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಷರು.
1	ಇಟ್ಟಿಗ್ಗೂಡಿನಲ್ಲಿ ಮೆಸ್ಸರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆ.	911	ನಂಜುಂಡಯ್ಯಂಗಾರ್, ರಾಮಸ್ವಾಮಿ ಮೊದಲಿಯಾರ್ ಮತ್ತು ಚಾಮುಂಡಿ.	ಅದು ಅಂಕಣಗಳ ಹೆಂಚಿನ ಮನೆ, ಮೂರು ಅಂಕಣಗಳ ಹೆಂಚಿನ ಹೈಸಾಲೆ, 1·44 ಚಕ್ಕರದ ತಾರೆಸಿ ಮಾಡಲ್ಪಟ್ಟು ಭಾಗ ಮಾಡಿ 6 ಅಂಕಣಗಳ ಹಿತ್ತಲ್ ಪೋರ್ಷನ್ ಮಾಡಲ್ಪಟ್ಟು ಭಾಗ.	64	18 + 16 / 2	ರಸ್ತೆ.	ರಸ್ತೆ.	ಮುಂದಿನ ಮನೆ.	ಗಲ್ಲಿ.	ಈ ಪ್ರದೇಶದಲ್ಲಿ ಮನೆಗಳು ಬಂದಕ್ಕೂಯು ಬಹಳ ಹಾಳಾಗಿ ಮಾಳು ಗಾಗಿ ಸಂಬಂಧಪಟ್ಟವರಿಂದ ಉಚಿತವಾಗಿದೆ. ಆದ್ದರಿಂದ ಸದರಿ ಪ್ರದೇಶವು ಬಿಟ್ಟಿದ್ದಕ್ಕೆ ಅವಶ್ಯವಾಗಿದೆ.

ತಾರೀಖು 2ನೇ ಡಿಸೆಂಬರ್ 1896.

ನಂ. 6331.—ಲೋ. ಫಂ. 65—96, ಸ್ ೧೮೯೪ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷ್ನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಜಮ್ಮಿಗಳು ಸರ್ಕಾರ್ ಕೆಲಸಕ್ಕೆ ಅಂದರೆ ಆಲೂರ್ ಷಹರ್ ಬಡಾವಣೆ ಬಗ್ಯಾಗಿ ಬೇಕಾಗಿರುತ್ತವೆ:—

ತಿಪ್ಪಸ್ತು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಜಮ್ಮಿ ತಪಶೀಲು. ನಂ. ಸರ್ವೆ	ನಂ. ಸರ್ವೆ	ಜೋಕಾದ ಪ್ಲಾನ್ನಿ	ಪೀಲ್ಡ್ಜು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ.	ರೂ. ಆ.				
ಹಾನಗಲ್	ಹಾವೇರಿ ಸಬ್ ತಾಲ್ಲೂಕು.	ಅಲೂರು.	ಆಲೂರು.	ಹುಸೇನ್‌ಸಾಬಿ (ಅನುಭವದಾರು) ಸುಬ್ಬೇಗೌಡ ಮತ್ತು ಬಸವೇಗೌಡ)	ಸರ್ವೆನಂಬರ್ 20ರ ಭಾಗ	ಪಟ್ಟಿಕ್ಕ	1—20	1—4	ಸರ್ವೆ ನಂಬರ್ 20ರ ಭಾಗ	ಕೊಳಕ್ಕೆ ಹೋಗುವ ರಸ್ತೆ	ಬಸವಲಿಂಗೇಗೌಡನ ಮತ್ತು ಇತರರ ಮನೆಗಳು	ಹಯಾತ್‌ಸಾಬಿಯ ಮತ್ತು ಇತರರ ಜಮ್ಮಿನುಗಳು
				ಬಸವಲಿಂಗೇಗೌಡ	ಡಿಟೋ	ಡಿಟೋ	1—29	1—8	ಆಸ್ಪತ್ರೆಯ ಕಂಪೌಂಡ್	ಸುಬ್ಬೇಗೌಡನ ಬಸವೇಗೌಡನ ಮತ್ತು ಇತರರ ಜಮ್ಮಿಗಳು	ಬಸವ ಲಿಂಗೇಗೌಡನ, ದಾಸೇಗೌಡನ, ಹುಚ್ಚೆಗೌಡನ ಮತ್ತು ಇತರರ ಮನೆಗಳು ಮತ್ತು ಹಿತ್ತಲುಗಳು	ಡಿಟೋ

ತಾರೀಖು 8ನೇ ಡಿಸೆಂಬರ್ 1896.

ನಂ. 6578.—ಲೋ. ಫಂ. 139—92, ಸ್ಯ 1892ನೇ ಇಸವಿಯ VIIIನೇ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ಮೇರೆ 1871ನೇ ಇಸವಿಯ 1ನೇ ನಂಬರ್ ಕಾಲ್ನಡಿಗೆಗಳ ಆಕ್ರಮ ಪ್ರವೇಶವನ್ನು ನಿರೋಧಪಡಿಸುವ ಬಗ್ಗೆ ಉಂಟಾದ ಆಕ್ಟಿನ 12ನೇ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರವನ್ನನುಸರಿಸಿ ಮೈಸೂರ ಗವರ್ಮೆಂಟಿನವರು ಆಜ್ಞಾಪಿಸುವದೇನಂದರೆ, ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯ ಸರಹದ್ದುಗಳಲ್ಲಿ ರಾತ್ರೆ 8 ಘಂಟೆಯಿಂದ ಪ್ರಾತಃಕಾಲ 4 ಘಂಟೆ ವರಿಗೂ ಆಕ್ರಮವಾಗಿ ಪ್ರವೇಶ ಮಾಡುವ ಕಾಲ್ನಡಿಗೆಗಳನ್ನು ಹಿಡಿದು ದೊಡ್ಡಿಗೆ ದಾಖಲಾದ ಪ್ರತಿ ರಾಸಿಗೂ ಈ ಕೆಳಗೆ ಕಂಡ ದರಗಳಂತೆ ಜುರ್ಮಾನೆಗಳು ವಸೂಲ್ಮಾಡಲ್ಪಡುವವು, ಹ್ಯಾಗಂದರೆ:—

ಆನೆಗೆ	ನಾಲ್ಕು ರೂಪಾಯಿಗಳು.
ವಂಟೆ ಯಾ ಎಮ್ಮೆಗೆ	ಒಂದು ರೂಪಾಯಿ.
ಕುದುರೆ, ಹೆಣ್ಣು ಕುದುರೆ, ಖಿಸಿಯಾದ ಕುದರೆ, ತಟ್ಟು, ಕುದರೆ ಗಂಡುಮರಿ, ಕುದರೆ ಹೆಣ್ಣುಮರಿ, ಗೂಳಿ, ಎತ್ತು, ಆಕಳು ಯಾ ಕಡಸಿಗೆ ..	ಎಂಟಾಣೆಗಳು.
ಕರ, ಕತ್ತೆ ಯಾ ಹಂದಿಗೆ	ನಾಲ್ಕಾಣೆಗಳು.
ಹಗರು, ಹೆಣ್ಣು ಹಗರು, ಕುರಿ, ಕುರಿಮರಿ, ಮೇಕೆ ಯಾ ಮೇಕೆ ಮರಿಗೆ ..	ಎರಡು ಆಣೆಗಳು.

ತಾರೀಖು 24ನೇ ನವಂಬರ್ 1896.

ನಂ. 5973.—4.—ಲೋ. ಫಂ. 17.—96, ಬೆಂಗಳೂರು ವ ಮೈಸೂರು ಷಹರುಗಳ ಮ್ಯುನಿಸಿಪಾಲಿಟಿಗಳಲ್ಲಿ ಇತರರ ಚುನಾವಣೆಗಳನ್ನು ನಡಿಸುವ ಬಗ್ಗೆ ಹಾಲಿ ಜಾರೀಲಿರುವ ರೂಲ್ಸಿಗೆ ಬದಲಾಗಿ ಈ ಕೆಳಗೆ ಕಂಡ ತಿದ್ದುಪಡಿಯಾದ ರೂಲ್ಸ್ ಜಾರೀಗೆ ತರುವ ಬಗ್ಗೆ ಮೈಸೂರ ಗವರ್ಮೆಂಟಿನವರು ನಿಶ್ಚಯಿಸಿರುತ್ತಾರೆ;—

ರೂಲ್ಸ್.

I. ಮತ್ತೊಂದು ಹುಕುಂ ಕೊಡುವ ಪರಿಯಂತ, ಪ್ರೆಸಿಡೆಂಟರು ಮತ್ತು ಯಕ್ಸ್ ಆಫಿಷಿಯೋ ಮೆಂಬರ್‌ಗಳೂ ದೇಖೀಲ್ ಮ್ಯುನಿಸಿಪಲ್ ಕಮ್ಮಿಷನರುಗಳ ಒಟ್ಟು ಸಂಖ್ಯೆಯು, ಬೆಂಗಳೂರು ವ ಮೈಸೂರು ಷಹರುಗಳ ಪ್ರತಿ ಯೊಂದರಲ್ಲಿಯೂ 20 ಆಗಿರತಕ್ಕದ್ದು. ಇವರುಗಳಲ್ಲಿ ಪ್ರತಿ ಮ್ಯುನಿಸಿಪಾಲಿಟಿಯೊಳಗೂ ಅರ್ಧ ಸಂಖ್ಯೆಯು ಕಂದಾಯ ಕೊಡುವವರಿಂದ ಚುನಾಯಿಸಲ್ಪಡತಕ್ಕದ್ದು, ಬಾಕಿ ಅರ್ಧ ಉದ್ಯೋಗತಃ ಆಗಲಿ ಯಾ ಹೆಸರಿನಿಂದಾಗಲಿ ಗವರ್ಮೆಂಟಿನವರಿಂದ ಮೊಕರರ್ರಾಡಲ್ಪಡತಕ್ಕದ್ದು. ಪ್ರತಿ ಡಿವಿಜನ್ನಲ್ಲಿಯೂ ಚುನಾಯಿಸಲ್ಪಡಬೇಕಾದ ಮೆಂಬರುಗಳ ಸಂಖ್ಯೆಯು ಪ್ರೆಸಿಡೆಂಟರವರಿಂದ ಪ್ರಸಿದ್ಧಪಡಿಸಲ್ಪಡತಕ್ಕದ್ದು.

II. ಮೈಸೂರು ಷಹರ್ ಮ್ಯುನಿಸಿಪಾಲಿಟಿಯಲ್ಲಿ ಬೆಂಗಳೂರಲ್ಲಿರುವ ಮೇರೆ ಅದೇ ಕೆಲಸಕ್ಕಾಗಿ ಬೇರೆ ಪ್ರೆಸಿಡೆಂಟರಿಲ್ಲದೆ ಇರುವದರಿಂದ ಡೆಪ್ಯೂಟಿ ಕಮ್ಮಿಷನರವರು ತಾತ್ಕಾಲಕ್ಕೆ ರೆಗ್ಯುಲೇಷನ್ ಅನುಸರಿಸಿ ಸದರೀ ಮ್ಯುನಿಸಿಪಾಲಿಟಿಯ ಎಕ್ಸ್ ಆಫಿಷಿಯೋ ಪ್ರೆಸಿಡೆಂಟರಾಗಿಯೂ ಮತ್ತು ಗವರ್ಮೆಂಟಿನಿಂದ ಮೊಕರರ್ರಾಡಲ್ಪಟ್ಟ ವೈಸ್ ಪ್ರೆಸಿಡೆಂಟರು ಸದರೀ ಮ್ಯುನಿಸಿಪಾಲಿಟಿಯ ಒಬ್ಬ ಎಕ್ಸ್ ಆಫಿಷಿಯೋ ಮೆಂಬರುಗಳಾಗಿಯೂ ಯಿರತಕ್ಕದ್ದು.

III. ಒಬ್ಬ ಮ್ಯುನಿಸಿಪಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹರಾಗಬೇಕಾದರೆ ಅವರು—

(a) ಪುರುಷರಾಗಿರಬೇಕು;
(b) 25 ವರುಷ ವಯಸ್ಸು ಪೂರೈಸಿರಬೇಕು;
(c) ವಿದ್ಯಾವಂತರಾಗಿರಬೇಕು;
(d) ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಮ್ಯುನಿಸಿಪಲ್ ಸರಹದ್ದುಗಳಲ್ಲಿ ವಾಸ ಮಾಡುತ್ತಿರಬೇಕು;
(e) ಚುನಾವಣೆಯ ಹಿಂದಿನ ವರುಷದಲ್ಲಿ ಸದರೀ ರೆಗ್ಯುಲೇಷನ್ ಅನುಸರಿಸಿ ತೆರಬೇಕಾದ ಮೊತ್ತದ ಮೊಬಲಗಿನಲ್ಲಿ 10 ರೂಪಾಯಿಗಳಿಗೆ ಕಡಿಮೆ ಇಲ್ಲದ ದರಗಳಾಗಲಿ, ತೆರಿಗೆಗಳಾಗಲಿ, ಜಮೀನ್ ಕಂದಾಯ ಯಾ ಮೊಹತರ್ಫಾ ಆಗಲಿ, ಇವುಗಳಲ್ಲಿ ಯೊಂದು ಯಾ ಹೆಚ್ಚು ಬಿಗೆಗಳ ಮೊಬಲಗನ್ನು ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು; ಅಥವಾ ಮೇಲ್ಕಂಡ ವರುಷದಲ್ಲಿ ಮನೆಯ ಯಾ ಆಂಗಡಿಯ ಯಾ ಇತರ ವಿಧಕಟ್ಟಡದ ಸ್ವಂತಗಾರರಾಗಿಯೂ, ಭೋಗ್ಯದಾರರಾಗಿಯೂ ಅಥವಾ ಬಾಡಿಗೆದಾರರಾಗಿಯೂ ಅನುಭವಿಸುತ್ತಿರಬೇಕು: ಮೇಲೆ ಹೇಳಿದ ಕಟ್ಟಡಕ್ಕೋಸ್ಕರ ಈ ಕ್ಲಾಜಿನ ಮೊದಲ್ಭಾಗದಲ್ಲಿ ಹೇಳಿರುವ ಮೊಬಲಗಲ್ಲದೆ 10 ರೂಪಾಯಿಗೆ ಕಡಿಮೆ ಯಿಲ್ಲದ ತೆರಿಗೆಯನ್ನು ಅಂಥಾ ವರುಷಕ್ಕಾಗಿ ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು. ಪರಂತು 1895ನೇ ಇಸವಿಯ IIIನೇ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ಡ್ಮಾಡಲ್ಪಟ್ಟ ಯೊಂದು ಕಂಪೆನಿಯಾಗಲಿ ಯಾ ಯೊಂದು ಅವಿಭಕ್ತ ಕುಟುಂಬವಾಗಲಿ ಈ ಕ್ಲಾಜಿನಲ್ಲಿ ವಿಧಿಸಲ್ಪಟ್ಟ ನಿಬಂಧನೆಗಳನ್ನು ಅದರಲ್ಲಿ ಹೇಳಿದ ಮೊಬಲಗುಗಳಿಗೆ ಎರಡರಷ್ಟಕ್ಕೆ ಕಡಿಮೆ ಇಲ್ಲದೆ ನೆರವೇರಿಸಿದ ತರುವಾಯ ಇತರ ಅವಶ್ಯಕವಾದ ಯೋಗ್ಯತೆಗಳುಳ್ಳ ಅದರ ಯಾವನೊಬ್ಬ ಮೆಂಬರಾಗಲಿ ಆ ಕಂಪೆನಿಯು ಯಾ ಆ ಕುಟುಂಬದ ವಾರಸ್ದಾರರಾಗಿ ಇರುವದರಿಂದ ಚುನಾವಣೆಗೆ ಅರ್ಹರಾಗಿರುತ್ತಾರೆ.

(f) ಇಂಡಿಯನ್ ಪಿನಲ್‌ಕೋಡ್ ಪ್ರಕಾರ 6 ತಿಂಗಳಿಗೆ ಕಡಿಮೆ ಇಲ್ಲದ ಕಾಲಕ್ಕೆ ಖೈದಿನೊಡನೆ ಸಿಕ್ಷಿಸಲ್ಪಡತಕ್ಕ ಯೊಂದು ತಕ್ಕೀರಿನಿಂದ ಆಪಾದಿಸಲ್ಪಟ್ಟರ ಕೂಡದು;
(g) ಚುನಾವಣೆ ತಾರೀಖಿನ ಹಿಂದೆ ಎರಡು ವರುಷದೊಳಗಾಗಿ ದಿವಾಳಿ ಖೋರರೆಂದು ಪ್ರಸಿದ್ಧಿ ಪಡಿಸಲ್ಪಟ್ಟರ ಕೂಡದು;
(h) ಸದರೀ ಮ್ಯುನಿಸಿಪಾಲಿಟಿಯ ಒಬ್ಬ ಆಫಿಸರಾಗಿಯಾಗಲಿ ಯಾ ನೌಕರರಾಗಿಯಾಗಲಿ ಕೆಲಸದಲ್ಲಿರಕೂಡದು;
(i) ಯಾವ ಜಾಯಂಟ್ ಸ್ಟಾಕ್ ಕಂಪೆನಿಯಲ್ಲಿಯೂ, ಮ್ಯುನಿಸಿಪಾಲಿಟಿಯೊಂದಿಗೆ ಅಥವಾ ಅದಕ್ಕಾಗಿ ನಡಿಸಲ್ಪಟ್ಟ ಕಂಟ್ರಾಕ್ಟು ವ ಕೆಲಸ ಯಿವಕ್ಕಾಗಿ ಭಾಗಸ್ಥರಾಗಿರುವದು ವಿನಹ ಅನ್ಯಥಾ ಮತ್ಯಾವ ಹಾಯಿದೆಯೂ ಉಳ್ಳಂಥಾವರಾಗಿ ಯಿರಕೂಡದು.

IV. ಪ್ರತಿ ಗಂಡಸರೂ ಚುನಾವಣೆ ಬಗ್ಯೆ ಅಭಿಪ್ರಾಯ ಕೊಡಲಿಕ್ಕೆ ಅರ್ಹರಾಗಬೇಕಾದರೆ ಅವರು 21 ವರುಷ ವಯಸ್ಸು ಪೂರೈಸಿಯೂ ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಸರಹದ್ದುಗಳಲ್ಲಿ ವಾಸ ಮಾಡುತ್ತಿರುವವರಾಗಿಯೂ ಈ ಕೆಳಗೆ ಕಂಡ ಪರತ್ತುಗಳ ಪೈಕಿ ಬಂದು ಯಾ ಹೆಚ್ಚು ಬಗೆಗಳು ನೆರವೇರಿಸಿದವರಾಗಿಯೂ ಯಿರಬೇಕು:—

(a) ಚುನಾವಣೆಯ ಹಿಂದಿನ ವರುಷದಲ್ಲಿ ಮ್ಯುನಿಸಿಪಲ್ ದರಗಳ್ಳಾಗಲಿ ಯಾ ತೆರಿಗೆಗಳ್ಳಾಗಲಿ ಯಾ ಗವರ್ನಮೆಂಟ್ ಜಮೀನ್ ಕಂದಾಯವಾಗಲಿ ಅಥವಾ ಆ ವರುಷಕ್ಕೆ ಮೊತ್ತದ ಮೊಬಲಗಿನಲ್ಲಿ 5 ರೂಪಾಯಿಗಳಿಗೆ ಕಡಿಮೆ ಇಲ್ಲದೆ ಮ್ಯುನಿಸಿಪಾಲಿಟಿಗೆ ಪೂರ್ತಿಯಾಗಿ ಜಮಾ ದಾಖಲಾಗಿಯಾಗಲಿ ಕೊಟ್ಟಿರಬೇಕು, ಅಥವಾ ಅವರು ಚುನಾವಣೆ ಬಗ್ಯೆ ಅಭಿಪ್ರಾಯ ಕೊಡಲಿಕ್ಕೆ ಅಪೇಕ್ಷಿಸುವ ಡಿವಿಜನಿನಲ್ಲಿ ಮೇಲ್ಕಂಡ ವರುಷದಲ್ಲಿ ಮನೆಯ, ಅಂಗಡಿಯ ಯಾ ಇತರ ಕಟ್ಟಡದ ಅನುಭವದಾರ್ರು ಯಾ ಮಾಲೀಕರಾಗಿಯೂ ಬಾಡಿಗೆದಾರ್ರು ಯಾ ಭೋಗ್ಯೆದಾರರಾಗಿಯೂ ಯಿರಬೇಕು; ಮೇಲ್ಕಂಡ ಕಟ್ಟಡಕ್ಕೊತ್ತಿಸ್ಕರ ಸದರೀ ವರುಷಕ್ಕೆ 5 ರೂಪಾಯಿಗಳಿಗೆ ಕಡಿಮೆ ಇಲ್ಲದ ತೆರಿಗೆಯನ್ನು ಪಟ್ಟಣ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು.

(b) ಇಂಡ್ಯದ ಅಥವಾ ಇತರ ದೇಶದ ಯಾ ಯುನಿವರ್ಸಿಟಿಯ ಗ್ರಾಡ್ಯುಯೇಟಾಗಿರಬೇಕು.

(c) ಚುನಾವಣೆ ನಡಿಯುವ ಹಿಂದಿನ ವರುಷಕ್ಕಾಗಿ ಪಟ್ಟಣ ಮ್ಯುನಿಸಿಪಾಲಿಟಿಗೆ ಮ್ಯುನಿಸಿಪಲ್ ರೆಗ್ಯುಲೇಷ್ನ ಪ್ರಕಾರ ಆ ವರುಷಕ್ಕೆ ಕೊಡಬೇಕಾದ ತೆರಿಗೆಗಳ 20 ರೂಪಾಯಿಗಳಿಗೆ ಕಡಿಮೆ ಇಲ್ಲದ ಮೊತ್ತದ ಮೊಬಲಗನ್ನು ಕೊಟ್ಟು ಇದ್ದು 1895ನೇ ಇಸವಿಯ IIIನೇ ರೆಗ್ಯುಲೇಷ್ನ ಮೇರೆ ರಿಜಿಸ್ಟರ್ ಮಾಡಲ್ಪಟ್ಟ ಯಾವ ಕಂಪೆನಿಯಿಂದಲಾಗಲಿ ಅಧಿಕಾರ ಹೊಂದಿರಬೇಕು ಯಾ ಅಂಥಾ ಕಂಪೆನಿಗೆ ಸೆಕ್ರಿಟೆರಿಯಾಗಿರಬೇಕು.

V. ಚುನಾಯಿಸಲ್ಪಟ್ಟ ಮ್ಯುನಿಸಿಪಲ್ ಕಮ್ಮಿಷನರು ಗವರ್ನಮೆಂಟಿನವರಿಂದ ತೆಗದುಹಾಕಲ್ಪಟ್ಟಲ್ಲಿ ಅಥವಾ ಅನರ್ಹರಾದ ಸಂದರ್ಭದಲ್ಲಿ ವಿನಾ ಅವರು ಚುನಾಯಿಸಲ್ಪಟ್ಟ ತಾರೀಖು ಮೊದಲು ಎರಡು ವರುಷಗಳ ವರೆಗೆ ಮತ್ತು ಅವರ ಸ್ಥಳದಲ್ಲಿ ಬೇರೊಬ್ಬರು ಚುನಾಯಿಸಲ್ಪಟ್ಟರೆಂದು ಪ್ರಕಟಿಸಲ್ಪಡುವ ಪರಿಯಂತರವೂ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

VI. ಮ್ಯುನಿಸಿಪಲ್ ಕಮ್ಮಿಷನರುಗಳ ಚುನಾವಣೆಯು ಸಾಧಾರಣವಾಗಿ ಎರಡು ವರುಷಗಳಿಗೊಂಪಾವರ್ತಿ ಗವರ್ನಮೆಂಟಿನವರಿಂದ ಗೊತ್ತು ಮಾಡಲ್ಪಡಬಹುದಾದ ಫಲಾನಾ ತಿಂಗಳು ಮತ್ತು ಫಲಾನಾತಾರೀಖು ಯಾ ತಾರೀಖುಗಳಲ್ಲಿ ನಡಿಸಲ್ಪಡತಕ್ಕದ್ದು. ಅಂಥಾ ಪ್ರತಿ ಚುನಾವಣೆಯೂ ಚೀಟಿ ಹಾಕುವದರ ಮೂಲಕ ನಡಿಸಲ್ಪಡತಕ್ಕದ್ದಲ್ಲದೆ ಅದು ಪ್ರಸಿಡೆಂಟರ ಮೇಲ್ವಿಚಾರಣೆಯಲ್ಲಾಗಲಿ ಅಥವಾ ಆ ಕೆಲಸಕ್ಕಾಗಿ ಅವರಿಂದ ನಿಯಮಿಸಲ್ಪಟ್ಟ ಇತರ ಆಫಿಸರ ಮೇಲ್ವಿಚಾರಣೆಯಲ್ಲಾಗಲಿ ಚುನಾವಣೆ ತಾರೀಖಿಗೆ ಅಥವಾ ಪಕ್ಷ ವೊಂದು ತಿಂಗಳ ಮುಂಚಿತವಾಗಿ ಮೈಸೂರ ಗೆಜೆಟ್ಟಿನಲ್ಲಿ ನೋಟಿಸು ಮೂಲಕ ಪ್ರಸಿದ್ಧಪಡಿಸುವಂಥಾ ಸ್ಥಳದಲ್ಲಿಯೂ ಕಾಲದಲ್ಲಿಯೂ ನಡಿಸಲ್ಪಡತಕ್ಕದ್ದು.

VII. ಕಮ್ಮಿಷನರುಗಳಾಗಿ ಚುನಾಯಿಸಲ್ಪಡುವ ಬಗ್ಯೆ ಅರ್ಹರಾದ ಮನುಷ್ಯರ ಹೆಸರು ಮತ್ತು ಅಂಥಾ ಚುನಾವಣೆ ಬಗ್ಯೆ ಅಭಿಪ್ರಾಯ ಕೊಡಲು ಯೋಗ್ಯತಾಉಳ್ಳ ಮನುಷ್ಯರ ಹೆಸರು ಸುದಾ ತೋರಿಸುವ ನ್ಯೂಸು ಪಟ್ಟಿಯು, ಚುನಾವಣೆ ಬಗ್ಯೆ ಗೊತ್ತು ಮಾಡಲ್ಪಟ್ಟ ತಾರೀಖಿಗೆ ಮುಂಚಿತವಾಗಿ ಎರಡು ತಿಂಗಳಿಗೆ ಜಾಸ್ತಿಯಿಲ್ಲದೆ ಪ್ರೆಸಿಡೆಂಟರವರಿಂದ ಮೈಸೂರ ಗೆಜೆಟ್ಟಿನಲ್ಲಿ ಘೋಷಿಸ್ಪಡಲ್ಪಡತಕ್ಕದ್ದು.

VIII. ಚುನಾಯಿಸಲ್ಪಡುವ ಬಗ್ಯಾಗಲಿ ಅಥವಾ ಆ ಬಗ್ಯೆ ಅಭಿಪ್ರಾಯ ಕೊಡುವ ಬಗ್ಯಾಗಲಿ ಅರ್ಹರಾದ ಮನುಷ್ಯರ ಹೆಸರು VIIನೇ ಪ್ಯಾರಾದಲ್ಲಿ ನಮೂದಾದಪಟ್ಟಿಯಲ್ಲಿ ಬಿಡಲ್ಪಟ್ಟಿದ್ದರೆ, ಅವರು, ಸದರೀ ಪಟ್ಟಿಯು ಘೋಷಿಸ್ಪಡಲ್ಪಟ್ಟ ತಾರೀಖಿನ ಮೊದಲು ಒಂದು ತಿಂಗಳೊಳಗಾಗಿ, ಅವರ ಹೆಸರನ್ನು ಸದರೀ ಪಟ್ಟಿಯಲ್ಲಿ ದಾಖಲ್ಮಾಡುವಂತೆ ಪ್ರೆಸಿಡೆಂಟರವಂಗೆ ಅರ್ಜಿ ಬರೆದು ಕೊಳ್ಳತಕ್ಕದ್ದು. ಅಂಥಾ ಅರ್ಜಿಯು ದಾಖಲಾದ ತರುವಾಯ, ಪ್ರೆಸಿಡೆಂಟರು ಅರ್ಜೀದಾರನ ಹೆಸರನ್ನು ದಾಖಲ್ಮಾಡತಕ್ಕದ್ದೆಂತಾಗಲಿ ಯಾ ಅನ್ಯಥಾ ಆಗಲಿ ಹುಕುಂ ಮಾಡತಕ್ಕದ್ದಲ್ಲದೆ ಮತ್ತು ಸದರೀ ವಿಚಾರಣೆಯ ಖರ್ಚುಗಳ ಸಾವತೀ ವಿಷಯದಲ್ಲಿ ಸಹ ಅವರಿಗೆ ನ್ಯಾಯವಾಗಿ ತೋರುವಂತೆ ಹುಕುಂ ಮಾಡತಕ್ಕದ್ದು, ಮತ್ತು ಅಂಥಾ ಹುಕುಂ ಆಖೈರಾದ್ದಾಗಿರತಕ್ಕದ್ದು.

IX. ಚುನಾವಣೆಗೆ ಗೊತ್ತಾದ ತಾರೀಖಿಗೆ ಅಥವಾ ಪಕ್ಷ ಮೂರು ವಾರಗಳ ಮುಂಚೆ ಯಾವ ಮನುಷ್ಯರಾದರೂ ಮೇಲ್ಕಂಡ ರೂಲ್ಸ್ ಅನುಸಾರವಾಗಿ ಒಬ್ಬ ಮ್ಯುನಿಸಿಪಲ್ ಕಮ್ಮಿಷನರಾಗುವದಕ್ಕೆ ಯಿಷ್ಟಪಡುವ ಪಕ್ಷಕ್ಕೆ ಅಂಥಾ ಮನುಷ್ಯರು ತಮ್ಮ ಹೆಸರನ್ನೂ ಮತ್ತು ತಾವು ಯಾವ ಡಿವಿಜನಿಗೆ ಮ್ಯುನಿಸಿಪಲ್ ಕಮ್ಮಿಷನರಾಗಿರುವ ಬಗ್ಯೆ ಅಪೇಕ್ಷಿಸುತ್ತಾರೋ ಅದನ್ನೂ ನಮೂದಿಸಿ ಪ್ರೆಸಿಡೆಂಟರಿಗೆ ಬರಹ ಮೂಲಕ ತಿಳಿಸತಕ್ಕದ್ದು. ತರುವಾಯ ಅಂಥಾ ಅರ್ಜಿದಾರರ ಪಟ್ಟಿಯು ಮೈಸೂರ ಗೆಜೆಟಿನಲ್ಲಿ ಘೋಷಿಸ್ಪಡಲ್ಪಡತಕ್ಕದ್ದಲ್ಲದೆ, ಚುನಾವಣೆ ಬಗ್ಯೆ ಗೊತ್ತಾದ ತಾರೀಖಿಗೆ ಅಥವಾಪಕ್ಷ ಹತ್ತು ದಿನಗಳ ಮುಂಚಿತವಾಗಿ ಪ್ರತಿ ಯೊಬ್ಬ ಅಭಿಪ್ರಾಯಸ್ಥರಿಗೂ ಸಹ ಕಳುಹಿಸಲ್ಪಡತಕ್ಕದ್ದು.

X. ಚುನಾಯಿಸಲ್ಪಟ್ಟ ತರುವಾಯ, ಪ್ರೆಸಿಡೆಂಟರು, ಪ್ರತಿ ಚುನಾವಣೆಯಲ್ಲಿಯೂ ಉಮೇದ್ವಾರರುಗಳನ್ನು ಅವರವರಿಗೋಸ್ಕರ ಕೊಡೋಣಾದ ಅಭಿಪ್ರಾಯಗಳ ಕ್ರಮಾನುಸಾರವಾಗಿ ವಿಂಗಡಿಸಿ, ಚುನಾಯಿಸಲ್ಪಡಬೇಕಾದ ಮ್ಯುನಿಸಿಪಲ್ ಕಮ್ಮಿಷನರುಗಳ ಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟು, ಅವರವರ ದರ್ಜೆ ಕ್ರಮವನ್ನನುಸರಿಸಿ ಚುನಾಯಿಸಲ್ಪಟ್ಟಿಂತೆ ತಿಳಿಸತಕ್ಕದ್ದು; ಪರಂತು ಯಾವ ಕಮ್ಮಿಷನರಾಗಲಿ, ಅವರಿಗೋಸ್ಕರ ಅಭಿಪ್ರಾಯ ಕೊಡುವ ಬಗ್ಯೆ ಅರ್ಹರಾದ ಜನಗಳ ನ್ಯೂಟ್ಟು ಸಂಖ್ಯೆಯಲ್ಲಿ ಅಥವಾಪಕ್ಷ $\frac{1}{8}$ನೇ ಸಂಖ್ಯೆಯುಳ್ಳ ಜನಗಳ ಅಭಿಪ್ರಾಯ ಪಡೆದ ಹೊರ್ತು ಚುನಾಯಿಸಲ್ಪಟ್ಟಿಂತೆ ಭಾವಿಸಲ್ಪಡತಕ್ಕದ್ದಲ್ಲ. ಬಂದೇ ಕೆಲಸಕ್ಕೆ ಎರಡು ಯಾ ಹೆಚ್ಚು ಉಮೇದ್ವಾರರು ಸಮ ಸಂಖ್ಯೆಯ ಅಭಿಪ್ರಾಯ ಹೊಂದುವದಾದರೆ, ಪ್ರೆಸಿಡೆಂಟರು ಆ ಪೈಕಿ ಯಾರು ಚುನಾಯಿಸಲ್ಪಡತಕ್ಕದ್ದೆಂದೂ ಅದನ್ನು ತೀರ್ಮಾನಿಸತಕ್ಕದ್ದು.

XI. ಚುನಾವಣೆ ಬಗ್ಯಾಗಿ ಉಮೇದ್ವಾರರು ಯಿಲ್ಲದ ಪಕ್ಷದಲ್ಲಿ ಅಥವಾ ಅವರು ಅವಶ್ಯಕವಾದ ಕಮ್ಮಿ ಸಂಖ್ಯೆಯು ಅಭಿಪ್ರಾಯವನ್ನಾದರೂ ಪಡೆಯಲಿಕ್ಕೆ ತಪ್ಪಿದ ಪಕ್ಷದಲ್ಲಿ ಅಂಥಾ ನೇಮಣೂಕೆಯು ಗವರ್ನಮೆಂಟಿನವರಿಂದ ಭರ್ತೀ ಮಾಡಲ್ಪಡತಕ್ಕದ್ದು.

XII. ಯಾವ ಮ್ಯುನಿಸಿಪಲ್ ಕಮ್ಮಿಷನರಾದರೂ ಆವರ ರಾಜೀನಾಮೆಯನ್ನು ಪ್ರೆಸಿಡೆಂಟರಿಗೆ ಪೊಪ್ಪಿಸಬಹುದು, ಮತ್ತು ಅಂಥಾ ರಾಜೀನಾಮೆಯು ಅಂಗೀಕರಿಸಲ್ಪಟ್ಟು ಯಾ ಅಂಥಾ ರಾಜೀನಾಮೆಯು ತಾರೀಖು ಲಾಗಾಯತು ಎರಡು ತಿಂಗಳು ಕಳೆದ ತರುವಾಯ ಅವರು ಸದರೀ ಉದ್ಯೋಗವನ್ನ ಖಾಲೀ ಮಾಡಿದಂದೆ ಭಾವಿಸಲ್ಪಡತಕ್ಕದ್ದು.

XIII. ಸಾಧಾರಣವಾಗಿ ನಡಿಯತಕ್ಕ ಎರಡು ಚುನಾವಣಿಗಳ ಮಧ್ಯಕಾಲಗಳಲ್ಲಿ ಮ್ಯುನಿಸಿಪಲ್ ಕಮ್ಮಿಷನರುಗಳ ಮರಣದಿಂದಾಗಲಿ, ರಾಜೀನಾಮೆಕೊಡುವಣದರಿಂದಾಗಲಿ, ತಗ್ಗೆರ್ ಯಾ ಯಿತರ ಕಾರಣದಿಂದಾಗಲಿ ಉದ್ಯೋಗ ಖಾಲಿಯಾದರೆ, ಉಳಿದ ಕಮ್ಮಿಷನರುಗಳು ಸದರೀ ಖಾಲಿಯನ್ನ ಗವರ್ಮೆಂಟಿನವಕ ಮಂಜೂರಾತಿಗೆ ಒಳಪಟ್ಟು, ವಿದಿಸೋಣಾದ ಯೋಗ್ಯತಾಗಳುಳ್ಳ ಬಬ್ಬ ಮನುಷ್ಯರನ್ನು ಪೊಕರರ್ನಾಡುವದರ ಮೂಲಕ ಖಾಲಿಯನ್ನ ಭರ್ತೀ ಮಾಡತಕ್ಕದ್ದು; ಮತ್ತು ಹಾಗೆ ಪೊಕರರ್ನಾಡಲ್ಪಟ್ಟ ಮನುಷ್ಯರು, ಗವರ್ಮೆಂಟಿನವರಿಂದ ತೆಗೆದುಹಾಕಲ್ಪಟ್ಟ ಹೊರ್ತು, ಖಾಲಿಯಾದ ಉದ್ಯೋಗದಲ್ಲಿದ್ದ ಮೆಂಬರು ಸಾಧಾರಣವಾಗಿ ಉದ್ಯೋಗದಲ್ಲಿರಬಹುದಾಗಿದ್ದ ಕಾಲದಪರಿಯಂತ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

ತಾರೀಖು 30ನೇ ನವೆಂಬರ್ 1896.

ಆಜ್ಞಾಪ್ತ.

ನಂ. 6233.—ಲೋ. ಫಂ. 17—96, ಸ್ಯ 1896ನೇ ನವೆಂಬರ್ 24ನೇ ಮರ್ತ್ತಂ 5973.–4 ಲೋ. ಫಂ. 17–96ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ IIIನೇ ರೂಲ್, (e) ಕ್ಲಾಜ್ 6ನೇ ಪಬ್ತಿಯಲ್ಲಿ "ಈ ಕ್ಲಾಜಿನ ಮೊದಲ್ಭಾಗದಲ್ಲಿ ಹೇಳಿರುವ ಮೊಬಲಗಲ್ಲದೆ" ಎಂಬ ಮಾತುಗಳನ್ನು ಬಿಟ್ಟುಬಿಡತಕ್ಕದ್ದು.

ತಾರೀಖು 11ನೇ ಡಿಸೆಂಬರ್ 1896.

ನಂ. 6746.—ಮಿ. 1277, ಮೆಸ್ಟರ್ ಕೆ. ಕೃಷ್ಣ ಅಯ್ಯರ್ ಯವರು, ಮೆಸ್ಟರ್ ಸಿ. ಶ್ರೀಕಂಠೇಶ್ವರ ಅಯ್ಯರ್ ಯವರು ಅಸಿಸ್ಟೆಂಟ್ ಕಂಟ್ರೋಲರಾಗಿ ಹಂಗಾಮಿ ತರೀಕ ಕೆಲಸದಲ್ಲಿರುವ ಕಾಲದಲ್ಲಿ, ದಿವ್ಯಾರವರಿಗೆ ಪ್ರೈವೇಟ್ ಸೆಕ್ರಟೆರಿಯಾದ ತಮ್ಮ ಕೆಲಸಗಳೊಂದಿಗೆ ಗವರ್ಮೆಂಟ್ ಅಸಿಸ್ಟೆಂಟ್ ಸೆಕ್ರಟೆರಿಯಾಗಿ ಆಕ್ಟಿಂಗ್ ತರೀಕ ಪೊಕರರ್ನಾಡಲ್ಪಟ್ಟಿರುತ್ತಾರೆ.

ತಾರೀಖು 12ನೇ ಡಿಸೆಂಬರ್ 1896.

ನಂ. 6775.—ಮಿ. 1281, ಮೆಸ್ಟರ್ ಎಂ. ಶ್ರೀನಿವಾಸರಾವ್, ಎಂ. ಏ., ಎಂ. ಬಿ., ಸಿ. ಎಂ. ವ ಬಿ. ಎಸ್. ಸಿ. (ಎಡಿಂಬರ್ಗ್) ಯವರು ಲೋಕಲ್ ಮೆಡಿಕಲ್ ನೌಕರಿಯಲ್ಲಿ 2ನೇ ಗ್ರೇಡ್ ಅಸಿಸ್ಟೆಂಟ್ ಸರ್ಜ್ಯರ್ಯಾಗಿ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಡಿಸೆಂಬರ್ 1896.

ನಂ. 6855.—ಜು. 781, ಮೈಸೂರ್ ಸರ್ವಿಸ್ ರೆಗ್ಯುಲೇಷಣಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಪೊಲೀಸ್ ಸೂಪರ್‌ಟೆಂಡೆಂಟ್ ಮೆಸ್ಟರ್ ಎಂ. ನಂಜರಾಜ ಅರಸಿನವರಿಗೆ, ಮಾಹೆ ಮಜಕೂರ್ 6ನೇ ಮರ್ತ್ತಂ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 26ನೇ ನವೆಂಬರ್ 1896.

ನಂ. 4789.—ರೆ. 1661, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ XXVIIನೇ ರೂಲ್ 1ನೇ ಪ್ಯಾರಾವಿಗೆ ಈ ಕೆಳಗೆ ಕಂಡ ನಿಯಮವನ್ನ ಕೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ಮೆಂಟಿನವರು ಆಜ್ಞಾಪಿಸುತ್ತಾರೆ:—

"ಪರಂತು ಬಂದು ಸರ್ವೆ ನಂಬರ್ ಖುಷ್ಕಿ ವ ತರೀ ಜಮೀರ್ಗಳು ಸಹಿತವಾಗಲಿ ಯಾ ಖುಷ್ಕಿ ತರೀ ವ ಬಾಗಾಯತು ಜಮೀರ್ಗಳು ಸಹಿತವಾಗಲಿ ಅಡಗಿಸಿಕೊಂಡಿದ್ದ ಪಕ್ಷದಲ್ಲಿ, ಈ ರೂಲುಗಳನುಸರಿಸಿ ಮಾಡಲ್ಪಟ್ಟ ಯಾವ ವಿಭಾಗವು ರೆವಿನ್ಯೂ ಸರ್ವೆ ಸೂಪರ್‌ಟೆಂಡೆಂಟ್ ರವರಿಂದ ಮಂಜೂರ್ಮಾಡಲ್ಪಟ್ಟಿದ್ದ ಹೊರ್ತು ನೆರವೇರಿಸಲ್ಪಡಲಾರದು. ಸದರೀಯವರಿಗೆ ಇಂಥಾ ಪ್ರತಿ ಸಂಗತಿಯೂ ತೃಪ್ತಿಯಾಯಿತು ದಾ "ಖಲೆಯೊಡನೆ ರಿಪೋರ್ಟು ಮಾಡಲ್ಪಡತಕ್ಕದ್ದು."

ನಂ. 4801—ರೆ. 1664, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಬೆಂಗಳೂರ್ ತಾಲ್ಲೂಕಿಗೆ ವಳಿತವಾಗಿದ್ದ "ಹಲಸೂರು ಹೋಬಳಿ" ಯನ್ನ ಇನ್ನು ಮೇಲೆ 1896ನೇ ಡಿಸೆಂಬರ್ ಗುರ್ತು ಲಾಗಾಯತು "ಕಸಬಾ ಬೆಂಗಳೂರು ಹೋಬಳಿ" ಎಂಬದಾಗಿ ಕರೆಯಲ್ಪಡತಕ್ಕದ್ದು.

ನಂ. 4802.—ರೆ. ಫೈ: 37—96, ಮೈಸೂರ್ ಸರ್ವಿಸ್ ರೆಗ್ಯುಲೇಷಗಳ 173ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅವುಲ್‌ದಾರ್ ಸಿ. ರಾಜಗೋಪಾಲಾಚಾರ್ಲು ಯವರಿಗೆ 1896ನೇ ನವೆಂಬರ್ 21ನೇ ಮರ್ತ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಬಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಸಿರಸ್ತೇದಾರು ಸದರೀ ರಾಜಗೋಪಾಲಾಚಾರ್ಲು ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 5ನೇ ಡಿಸೆಂಬರ 1896.

ನಂ. 5221.—ರೆ. 1754, ಅಸಿಸ್ಟೆಂಟ ಕಮ್ಮಿಷನರ ಮೆಸ್ಸರ್ ಸಿ. ಬಿ. ಶೇಷಗಿರಿರಾಯರು ಡೆಪ್ಯೂಟಿ ಕಮ್ಮಿಷನರ ಮೆಸ್ಸರ್ ಏ. ರಂಗಸ್ವಾಮಯ್ಯಂಗಾರ್ರಿಂದ 1896ನೇ ನವಂಬರ್ 25ನೇ ಮರ್ಕ್ಕುಮಿನ ಪೂರ್ವಾನ್ಹದಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ ವ ಟ್ರೆಜರಿಯ ಚಾರ್ಜನ್ನು ತೆಗೆದುಕೊಂಡಿರುತ್ತಾರೆ.

ತಾರೀಖು 7ನೇ ಡಿಸೆಂಬರ 1896.

ನಂ. 5257.—ರೆ. ಫೈ. 100.—95, ಮಂಡ್ಯದ ತಾಲ್ಲೂಕು ಅಮಲ್ದಾರ್ ವಿ. ಎ. ಗುರುರಾಯರಿಗೆ, 1896ನೇ ಆಕ್ಟೋಬರ 12ನೇ ಮರ್ಕ್ಕುಂ 3781.—ರೆ. ಫೈ. 100.—95ನೇ ನಂಬರ ಗವರ್ನಮೆಂಟ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಬಂದು ಬಿನದ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 8ನೇ ಡಿಸೆಂಬರ 1896.

ನಂ. 5264.—ರೆ. 1767, ಡೆಪ್ಯೂಟಿ ಕಮ್ಮಿಷನರ ಮೆಸ್ಸರ್ ಏ. ರಂಗಸ್ವಾಮಿ ಅಯ್ಯಂಗಾರ್ರು ಡೆಪ್ಯೂಟಿ ಕಮ್ಮಿಷನರ ಮೆಸ್ಸರ್ ಸಿ. ಮಾದಯ್ಯನವರಿಂದ ಕೋಲಾರ ಡಿಸ್ಟ್ರಿಕ್ಟ ವ ಟ್ರೆಜರಿ ಚಾರ್ಜನ್ನು 1896ನೇ ನವಂಬರ್ 28ನೇ ಮರ್ಕ್ಕುಮಿನ ಪೂರ್ವಾನ್ಹದಲ್ಲಿ ವಹಿಸಿಕೊಂಡಿರುತ್ತಾರೆ.

ನಂ. 5284—ರೆ, ಫೈ. 72—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟ ಫೈಂಕ್ಷನ್ಸ್ ಸಬ್ ಡಿವಿಜನ್ ಆಫಿಸರ್ ಮೆಸ್ಸರ್ ಪಂಚನಾಥರಾಯರಿಗೆ 1896ನೇ ನವಂಬರ್ 30ನೇ ಮರ್ಕ್ಕುಂ ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 5287—ರೆ. ಫೈ. 42—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟ ಮಳವಳ್ಳಿ ತಾಲ್ಲೂಕಿನ ಅಮಲ್ದಾರ್ ಕೃಷ್ಣೇ ಅರಸುನವರಿಗೆ 1896ನೇ ನವಂಬರ್ 7ನೇ ಮರ್ಕ್ಕುಂ ಲಾಗಾಯತು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 9ನೇ ಡಿಸೆಂಬರ 1896.

ನಂ. 5315—ರೆ. ಫೈ. 87—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ ಯಂಕ್ಷ್ಟ್ರಿ ಅಸಿಸ್ಟೆಂಟ ಕಮ್ಮಿಷನರ ಮೆಸ್ಸರ್ ಅಬ್ದುಲ್ ಅಜೀಜ್‌ಯವರಿಗೆ 1896ನೇ ನವಂಬರ್ 30ನೇ ಮರ್ಕ್ಕುಂ ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 5318.—ರೆ. ಫೈ. 88—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ ಮಾಲೂರುತಾಲ್ಲೂಕಿನ ಅಮಲ್ದಾರ್ ವಿ. ಎ. ಗೋಪಾಲರಾಯರಿಗೆ 1896ನೇ ನವಂಬರ್ 5ನೇ ಮರ್ಕ್ಕುಂ ಲಾಗಾಯತು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

2. ತಾಲ್ಲೂಕು ಶಿರಸ್ತೇದಾರ್ರು ಸದರೀ ಅಮಲ್ದಾರ್ರು ರಜಾದ ಮೇಲಿದ್ದ ಕಾಲದಲ್ಲಿ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿ ಇದ್ದರು.

ತಾರೀಖು 10ನೇ ಡಿಸೆಂಬರ 1896.

ನಂ. 5370.—ರೆ. ಫೈ. 100.—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟ ಮಂಡ್ಯ ತಾಲ್ಲೂಕಿನ ಅಮಲ್ದಾರ್ ವಿ. ಎ. ಗುರುರಾಯರಿಗೆ, 1896ನೇ ಡಿಸೆಂಬರ 2ನೇ ಮರ್ಕ್ಕುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 11ನೇ ಡಿಸೆಂಬರ 1896.

ನಂ. 5362.—ರೆ. 1797, ಡೆಪ್ಯೂಟಿ ಕಮ್ಮಿಷನರ ಮೆಸ್ಸರ್ ಸಿ. ಮಾದಯ್ಯನವರು, 1896ನೇ ಡಿಸೆಂಬರ 3ನೇ ಮರ್ಕ್ಕುಮಿನ ಮಧ್ಯಾನ್ಹಾತ್ಪರ ಮೈಸೂರ ಡಿಸ್ಟ್ರಿಕ್ಟ ವ ಟ್ರೆಜರಿಯ ಚಾರ್ಜನ್ನು ಮೆಸ್ಸರ್ ಬಿ. ಕೆ. ವೆಂಕಟವರದಯ್ಯಂಗಾರ್ರಿಂದ ತೆಗೆದುಕೊಂಡಿರುತ್ತಾರೆ.

ನಂ. 5367.—ರೆ. ಫೈ. 105.—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರ ಡಿಸ್ಟ್ರಿಕ್ಟ ತಿಪಟೂರು ತಾಲ್ಲೂಕಿನ ಅಮಲ್ದಾರ್ ಬಿ. ಸೀತಾರಾಮಯ್ಯನವರಿಗೆ, 1896ನೇ ಡಿಸೆಂಬರ 25ನೇ ಮರ್ಕ್ಕುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಸಿರಸ್ತೇದಾರ್ರು ಸದರೀ ಬಿ. ಸೀತಾರಾಮಯ್ಯನವರು ರಜಾದಮೇಲಿರುವ ಕಾಲದಲ್ಲಿಯಾ ಮತ್ತೊಂದು ಹುಕುಂ ಹೊಡ್ಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 11ನೇ ಡಿಸೆಂಬರ್ 1896.

ನಂ. 5402.—ರೆ. ಫೈ. 33.—96, ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಶ್ರೀನಿವಾಸರಾಯರಿಗೆ, 1896ನೇ ನವಂಬರ್ 3ನೇ ಮಕ್ತುಂ 4112.—ರೆ. ಫೈ. 33.—96ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಈಹಿಲೆ ರಜಾ 1897ನೇ ಜನವರಿ 1ನೇ ತಾರೀಖಿನ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ನಂ. 5405.—ರೆ. ಫೈ. 50.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಷಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ಬಿ. ವಾಸುದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮದ್ದಗಿರಿ ತಾಲ್ಲೂಕು ಅಮಲ್‌ದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಡೆಪ್ಯುಟಿ ಅಮಲ್‌ದಾರ್ರು ರಜಾದ ಮೇಲಿರುವ ಕಾಲದಲ್ಲಿ ಕೊರಟಗೆರೆ ಸಬ್ ತಾಲ್ಲೂಕಿನ ಚಾರ್ಜಿನಲ್ಲಿ ಇರತಕ್ಕದ್ದು.

ಹುಕುಂ ಬವೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರಟೆರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 8ನೇ ಡಿಸೆಂಬರ್ 1896.

ನಂ. 1006.—6503, ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಸರ್ ವಿ. ರಂಗಸಾಮಿ ಅಯ್ಯಂಗಾರ್, ಬಿ. ಸಿ, ಈ., ಯವರು, ಯಗ್ಜಿಕ್ಯೂಟಿವ್ ಇಂಜಿನಿಯರ್ ಮೆಸ್ಸರ್ಸ್ ಆರ್. ಟಿ. ಸ್ಕಾಲ್ಡ್‌ವೆಲ್‌ಯವರು ಪ್ರಿವಿಲೀಜ್ ರಜಾಪಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹೆಸರಘಟ್ಟಾ ವಾಟರ್ ಸಪ್ಲೈ ಡಿವಿಜನಿನ ಯಗ್ಜಿಕ್ಯೂಟಿವ್ ಇಂಜಿನಿಯರಾಗಿ ಅಫಿಷಿಯೇಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬವೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ಗವರ್ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರಟೆರಿ.